ಒಕ್ಕಣೆಯನ್ನು ಬರೆಯಲು ಕೂಡ ಮನುಷ್ಯನ ಮಿದುಳು ಒಪ್ಪುವುದು ಬಹಳ ಕಡಿಮೆಯಂತೆ. ಈ ಮಾಹಿತಿಯನ್ನು ಕೆಲವು ಅಧ್ಯಯನಗಳು ಪ್ರಕಟಿಸಿದ್ದವು. ಇದನ್ನು ವೈಯಕ್ತಿಕವಾಗಿಯೂ ನಾನು ಪರೀಕ್ಷಿಸಿ ನೋಡಿದ್ದೆ.

ಇದು ಚಿಕಿತ್ಸೆ ಮತ್ತು ವೈದ್ಯ ಇಂತಹವರ ಬಗೆಗಿನ ಮನುಷ್ಯನ ಕೃತಘ್ನತೆಯ ವಿಚಾರವಾದರೆ, ಇನ್ನು ಅಧ್ಯಾತ್ಮ, ವ್ಯಕ್ತಿತ್ವ ಬದಲಾವಣೆ ಇವೆಲ್ಲ ಎಷ್ಟು ಬೇಗ ಜೊಳ್ಳಾಗಬಹುದು? ಅದರಲ್ಲೂ ವ್ಯವಹಾರವನ್ನೇ ಉಸಿರಾಡುವ ಅವನಂತಹವರ ವಿಚಾರದಲ್ಲಿ? ಎನ್ನುವ ಸಂದೇಹ ನನ್ನಲ್ಲಿ ಹಾದುಹೋಯ್ತು.

ಅದನ್ನೂ ಪರೀಕ್ಷಿಸಿಯೇ ಬಿಡಬೇಕು ಎನ್ನಿಸಿತು.

“ದೇವರ ದಯೆಯಿಂದ ಗುಣಮುಖರಾಗಿ ಬಂದ ನಿಮಗೆ ಹೃತ್ಪೂರ್ವಕ ಅಭಿನಂದನೆಗಳು” ಎನ್ನುವ ಒಕ್ಕಣೆಯಿರುವ ಸಂದೇಶವನ್ನು ಅವನಿಗೆ ಬರೆದು ಕಳಿಸಿದೆ.

ಅವನ ಎಷ್ಟೋ ಜನ ಉದ್ಯೋಗಿಗಳಲ್ಲಿ ನಾನೂ ಒಬ್ಬನಾಗಿದ್ದೆ ಅಷ್ಟೆ. ಅಷ್ಟಕ್ಕೂ ನಮ್ಮ ಭೇಟಿಯಾಗಿ ಆರು ತಿಂಗಳಾಗಿತ್ತು. ಅವನಿಗೆ ನನ್ನ ನೆನಪಿರುತ್ತದೋ ಇಲ್ಲವೋ ಎಂದು ಸಂದೇಹ ಪಟ್ಟೆ. ಆದರೆ, ಮರುದಿನ ಆಶ್ಚರ್ಯವೆನ್ನುವಂತೆ ಉದ್ದವಾದ ಒಂದು ಸಂದೇಶ ಬಂದಿತ್ತು.

“ಧನ್ಯವಾದಗಳು. ನಿನ್ನ ಆರೋಗ್ಯವನ್ನು ಕೂಡ ಕಾಪಾಡಿಕೋ. ಅಕಸ್ಮಾತ್ ಕೆಮ್ಮು–ಜ್ವರ ಬಂದರೆ ಕಂಗೆಡುವ ಅಗತ್ಯವಿಲ್ಲ. ನನ್ನಂತಹ ವೃದ್ಧನೇ ಗೆದ್ದು ಬಂದಿದ್ದೇನೆ, ನಿಮ್ಮಂತಹವರಿಗೇನಾಗುವುದಿಲ್ಲ. ನಾನು ಹೇಳಿದ ಆಫರ್ ಈಗಲೂ ನಿನಗೆ ಲಭ್ಯವಿದೆ. ಬೇಕಾದರೆ ಇನ್ನೂ ಐದು ಪರ್ಸೆಂಟ್ ಹೆಚ್ಚು ಕೊಡುತ್ತೇನೆ. ಈ ವರ್ಷ ಕಡಿಮೆಯಾದ ಗಳಿಕೆಯನ್ನೆಲ್ಲ ಒಂದಕ್ಕೆರಡರಂತೆ ಮುಂದಿನ ವರ್ಷ ದುಡಿದುಕೊಳ್ಳಬೇಕು ತಾನೇ? ಯೋಚಿಸಿ ತಿಳಿಸು” ಎಂದು ಅಪ್ಪಟ ವ್ಯಾವಹಾರಿಕ ಭಾಷೆಯಲ್ಲಿ ಬರೆದಿದ್ದ.

ನದಿಯೊಂದರಲ್ಲಿ ಮುಳುಗಿ ಸಾಯುವುದು ಬರೀ ಅದರಲ್ಲಿ ಅಕಸ್ಮಾತ್ತಾಗಿ ಬೀಳುವುದರಿಂದ ಮಾತ್ರವಲ್ಲ ಅದರಿಂದ ಹೊರಬರುವ ಪ್ರಯತ್ನವನ್ನೇ ಮಾಡದಿದ್ದರೆ ಮಾತ್ರ ಎನ್ನಿಸಿತು.

ಕೊರೊನಾ ವೈರಸ್‌ನ ಸೋಂಕಿನಿಂದಾಗಿ ಸಾವಿನ ಬಾಯನ್ನು ಹೊಕ್ಕವರನ್ನು ಗುಣಪಡಿಸಬಹುದೇನೋ ಆದರೆ ಹಣದ ಮಹಾಮಾರಿ ಹೊಕ್ಕ ಕೆಲವರನ್ನು ಗುಣಪಡಿಸುವುದು ಯಾರಿಂದಲೂ ಸಾಧ್ಯವಿಲ್ಲವೆನಿಸಿ ನನ್ನ ಮುಖದಲ್ಲಿ ನಗೆಯೊಡೆಯಿತು.

ಅವನಿಗೆ ಉತ್ತರ ಬರೆಯಲು ಹೋಗಲಿಲ್ಲ.


**ಪ್ರೇಮಲತ ಬಿ.**

ವೃತ್ತಿಯಲ್ಲಿ ದಂತವೈದ್ಯೆ. ಕಳೆದ 17 ವರ್ಷಗಳಿಂದ ಇಂಗ್ಲೆಂಡಿನಲ್ಲಿ ವಾಸ. ಮೂಲತಃ ತುಮಕೂರಿನವರು. ದಿನಪತ್ರಿಕೆ, ವಾರಪತ್ರಿಕೆ ಮತ್ತು ಅಂತರ್ಜಾಲ ತಾಣಗಳಲ್ಲಿ ಲೇಖನ ಮತ್ತು ಕವನಗಳು ಪ್ರಕಟವಾಗಿವೆ. ‘ಪ್ರಜಾವಾಣಿ’ ಪ್ರೇಮಪತ್ರ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ‘ಸುಧಾ’ ಯುಗಾದಿ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದಾರೆ. ಅವರ ‘ಬಾಯೆಂಬ ಬ್ರಂಹಾಂಡ’ ಎನ್ನುವ ವೃತ್ತಿಪರ ಕಿರು ಪುಸ್ತಕವನ್ನು ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿದೆ.